**ದಿನಾಂಕಃ03.03.2023. ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು**

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಲ್.ಎಂ ಪರ ಎಸ್.ಆರ್. ವಕೀಲರಿಂದಃ**

ದೂರಿನಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ನನಗೆ ಗೊತ್ತು. ನಾನು ಟಾಟಾ ಮೋಟಾರ್ಸ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಸದರಿ ನಮ್ಮ ಫೈನಾನ್ಸ ಕಂಪನಿಯವರು ಈ ಕೇಸ್ ನಡೆಸಲು letter of authority ನೀಡಿರುತ್ತಾರೆ. ನಿ.ಪಿ.8 letter of authority ಗೆ ಯವುದೇ **ಸ್ಟ್ಯಾಂಪ್** ಹಣ ಕಟ್ಟಿರುವುದಿಲ್ಲ ಎಂದರೆ ನಿಜ. ನಮ್ಮದು ಖಾಸಗೀ ಕಂಪನಿಯಾಗಿರುತ್ತದೆ. ಖಾಸಗೀ ಕಂಪನಿಯವರಿಗೆ ಸದರಿ letter of authority ಆಧಾರದ ಮೇಲೆ ಕೇಸ್ ಹಾಕಲು ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ letter of authority ಗೆ Board of resolution ದಿಃ 11.05.2021 ರಂದು ಮಂಜೂರು ಮಾಡಿರುತ್ತಾರೆ. ಆ Board of resolution ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನಿಜ. Board of resolution ಪ್ರಕಾರ letter of authority Stamp duty ತುಂಬದೇ ಹಾಜರುಪಡಿಸಲು ನಾವು ಸರ್ಕಾರದಿಂದ ಪರವಾನಗಿ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ ಆದರೆ ದಾಖಲೆ ಹಾಜರುಪಡಿಸಬಲ್ಲೆ ಎಂದು ಸಾಕ್ಷಿ ನುಡಿಯುತ್ತಾರೆ. ಆರೋಪಿತರಿಗೆ ಕಳುಹಿಸಿದ ನೋಟೀಸಿನಲ್ಲಿರುವ ವಿಷಯ ನನಗೆ ಗೊತ್ತು. ನಿ.ಪಿ.5 ನೋಟೀಸನ್ನು ದಿಃ 31.07.2017 ರಂದು ನಮ್ಮ ವಕೀಲರ ಮುಖಾಂತರ ಕಳುಹಿಸಿರುತ್ತೇವೆ ಎಂದರೆ ನಿಜ. ಸದರಿ ನಿ.ಪಿ.5 ನೋಟೀಸಿಗೆ ಮಾಹಿತಿ ನಮ್ಮ ಕಂಪನಿಯ ಕಾನೂನು ಸಲಹೆಗಾರರು ಕೊಟ್ಟಿರುತ್ತಾರೆ. ಸದರಿ ನಿ.ಪಿ.5 ನೋಟೀಸ್ ಗೆ ನಮ್ಮ ಕಂಪನಿಯ ಯಾವುದೇ ಅಧಿಕಾರಿ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.5 ರಲ್ಲಿ ಅವರ ಹೆಸರು ನಮೂದಾಗಿಲ್ಲ ಎಂದರೆ ನಿಜ. ಸದರಿ ನಿ.ಪಿ.5 ನೋಟೀಸ್ ಕೇವಲ Deemed notice ಆಗಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ.6 ರ ಪ್ರಕಾರ ನೋಟೀಸನ್ನು ದಿಃ 04.08.2017 ರಂದು ಅಂಚೆ ಮೂಲಕ ಕಳುಹಿಸಿರುತ್ತೇವೆ ಎಂದರೆ ನಿಜ. ನೋಟೀಸಿನಲ್ಲಿರುವ ವಿಳಾಸ ಗಜೇಂದ್ರ ಬೆಂಗಳೂರು ಪಿನ್ 560029 ಎಂದು ನಿ.ಪಿ.6 ರಲ್ಲಿ ನಮೂದಾಗಿರುತ್ತದೆ ಎಂದರೆ ನಿಜ. ನಿ.ಪಿ.5 ನೋಟೀಸನ್ನು ನಾವು ಎಂದೂ ಆರೋಪಿತರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.5 ರಲ್ಲಿ ಹೆಸರು ಗಜೇಂದ್ರ ಬಿ ಇರುತ್ತದೆ ಆದರೆ ನಿ.ಪಿ.6 ರಲ್ಲಿ ಗಜೇಂದ್ರ ಮಾತ್ರ ಇರುತ್ತದೆ ಎಂದರೆ ನಿಜ. ನಿ.ಪಿ.6 ರಲ್ಲಿ ನಮೂದಾದ ಪಿನ್ ಕೋಡ್ ನಂ 560029 ಬೆಂಗಳೂರಿನ ತಾವರೆಕೆರೆಯದ್ದಾಗಿರುತ್ತದೆ ಎಂದರೆ ನಿಜ. ನಾನು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡಿ ಸುಳ್ಳು ದಾಖಲೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ನೋಟೀಸ್ ಜಾರಿಯಾಗಿರುತ್ತದೆ. ಆರೋಪಿತರಿಗೆ ನೋಟೀಸ್ ಜಾರಿಯಾಗಿರುತ್ತದೆ ಎಂದು ತೋರಿಸಲು ನಾವು ಅಂಚೆ ರಶೀದಿ ಹಾಜರುಪಡಿಸಿರುತ್ತೇವೆ. ಈಗ ನೋಡುತ್ತಿರುವ ನಿ.ಪಿ.7 ದಾಖಲೆ Postal Track consignment report ಆಗಿದ್ದು ಅದರ ಪ್ರಕಾರ ಆರೋಪಿತರಿಗೆ ನೋಟೀಸ್ ಜಾರಿಯಾಗಿರುತ್ತದೆ. ನಾನು ಕಾನೂನು ಪದವೀಧರನಾಗಿರುತ್ತೇನೆ.

ನಿ.ಪಿ.7 ರ ಪ್ರಕಾರ Destination Pin code 560029 and delivered at Jalige B.O (branch office) ಎಂದು ನಮೂದಾಗಿರುತ್ತದೆ ಎಂದರೆ ನಿಜ. ನಾವು ಕಳುಹಿಸಿದ ನೋಟೀಸ್ ಇವತ್ತಿನ ವರೆಗೆ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.3 ಚೆಕ್ ನಲ್ಲಿ TATA Motors finance ltd., seal ಅನ್ನು ನಮ್ಮ ಕಂಪನಿಯವರು ಹಾಕಿರುತ್ತಾರೆ. ಅದೇ ರೀತಿ ನಿ.ಪಿ.3 ರಲ್ಲಿ ದಿಃ 18.03.2017 ಎಂದು ದಿನಾಂಕದ ಸೀಲನ್ನು ಯಾರು ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ದಿನಾಂಕದ ಸೀಲನು ಕೂಡ ನಮ್ಮ ಕಂಪನಿಯವರೇ ಹಾಕಿ ಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಚೆಕ್ಕನ್ನು ಹೇಗೆ ಪಡೆದಿರುತ್ತೇವೆ ಎಂದು ನನಗೆ ಮಾಹಿತಿ ಇರುತ್ತದೆ. ನಿ.ಪಿ.3 ಚೆಕ್ ನಲ್ಲಿ ಅಕ್ಷರದಲ್ಲಿ ಬರೆದಿರುವ five lakhs fifty eight thousand two hundred ten Rs. Only ಎಂದು ಯಾರು ಬರೆದಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಸದರಿ ನಿ.ಪಿ.3 ಚೆಕ್ ನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.3 ಚೆಕ್ ನಲ್ಲಿರುವ ಸಹಿ Gajendra B ಎಂದು ಗ್ರಾಹಕರು ಎಂದರೆ ಆರೋಪಿತರು ಬರೆದುಕೊಟ್ಟಿರುತ್ತಾರೆ. ಸದರಿ ನಿ.ಪಿ.3 ಚೆಕ್ಕನ್ನು ಆರೋಪಿತರಿಂದ ಸಾಲ ಮೊತ್ರದ ಮರು ಪಾವತಿಗೆ ಪಡೆದಿರುತ್ತೇವೆ. ನಾನು ಫಿರ್ಯಾದುದಾರರ ಕಂಪನಿಯಲ್ಲಿ legal Officer ಆಗಿರುತ್ತೇನೆ. ನಾವು ಆರೋಪಿತರಿಗೆ ಎಷ್ಟು ಸಾಲ ಕೊಟ್ಟಿರುತ್ತೇವೆ ಎಂದು Statement ನೋಡದೆ ಹೇಳಲು ಬರುವುದಿಲ್ಲ. ಆ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ನಿಜ. ಆರೀತಿ ಯಾವುದೇ ದಾಖಲೆ ನಮ್ಮ ಕಂಪನಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಿಃ 18.07.2017 ರ ವರೆಗೆ ರೂ.5,58,210/- ಕೆಡಬೇಲು ಎಂದು ನಿ.ಪಿ.3 ಚೆಕ್ಕನ್ನು ಹಾಜರುಪಡಿಸಿದ್ದು ಅದಕ್ಕಿಂತ ಮುಂಚೆ ಆರೋಪಿತರು ಎಷ್ಟು ಸಾಲದ ಹಣ ಪಾವತಿಸಿರುತ್ತಾರೆ ಎಂದು ನನಗೆ ದಾಖಲೆ ನೋಡದೆ ಹೇಳಲು ಬರುವುದಿಲ್ಲ. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ನಿಜ. ನಾವು ಆರೋಪಿತರಿಗೆ ಸಾಲವನ್ನು ಯಾವ ರೀತಿ ನಗದು ಅಥವಾ ಚೆಕ್ ಮೂಲಕ ನೀಡಿರುತ್ತೇವೆ ಎಂದು ನನಗೆ ದಾಖಲೆ ನೋಡದೆ ಹೇಳಲು ಬರುವುದಿಲ್ಲ. ಆ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ನಿಜ. ನಾವು ಆರೋಪಿತರಿಗೆ ಯಾವ ರೀತಿ ಸಾಲವನ್ನು ನೀಡಿರುತ್ತೇವೆ ಮತ್ತು ಎಷ್ಟು ಹಣಕ್ಕೆ ಸಾಲ ನೀಡಿರುತ್ತೇವೆ ಎಂದು ನನಗೆ ಗೊತ್ತಿಲ್ಲದಿದ್ದರೂ ಸಹ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಆರೋಪಿತರಿಗೆ ಯಾವುದೇ ಸಾಲದ ರೂಪದಲ್ಲಿ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಸಾಲ ನೀಡಿದ ಬಗ್ಗೆ ಕರಾರು ಪತ್ರ ದಾಖಲೆ ಆಧಾರದ ಮೇಲೆ ಹೇಳಿ ಬರೆಸಿರುತ್ತೇನೆ. ಆ ಕರಾರುಪತ್ರವನ್ನು ನಾನು ನೋಡಿರುತ್ತೇನೆ. ನಾನು agreement No.5001132293 ದಾಖಲೆಯನ್ನು ನೋಡಿ ಓದಿ ತಿಳಿದುಕೊಂಡಿರುತ್ತೇನೆ. ಸದರಿ agreement ಯಾವ ದಿನಾಂಕದಂದು

ಬರೆದುಕೊಟ್ಟಿರುತ್ತಾರೆ ಎಂದು ನನಗೆ ದಾಖಲೆ ನೋಡದೆ ಹೇಳಲು ಬರುವುದಿಲ್ಲ. ಸದರಿ agreement ನಲ್ಲಿ ಎಷ್ಟು ಸಾಲದ ಹಣಕ್ಕೆ ಬರೆದುಕೊಟ್ಟಿರುತ್ತಾರೆ ಎಂದು ನನಗೆ ದಾಖಲೆ ನೋಡದೆ ಹೇಳಲು ಬರುವುದಿಲ್ಲ. ಸದರಿ agreement No.5001132293 ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ನಿಜ. ಸದರಿ agreement No.5001132293 ದಾಖಲೆಯನ್ನು ನಾನು ನೋಡಿಲ್ಲ ಮತ್ತು ಓದಿಲ್ಲ ಅದರೂ ಕೂಡ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ನಾನು ಹೇಳುವ ರೀತಿಯಲ್ಲಿ ಯಾವುದೇ agreement ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು agreement ಬಗ್ಗೆ ಓದಿ ತಿಳಿದುಕೊಂಡಿಲ್ಲ ಆ ಕಾರಣದಿಂದ ನನ್ನ ಪ್ರಮಾಣ ಪತ್ರದಲ್ಲಿ ದಿನಾಂಕ ಮತ್ತು ಹಣದ ಮೊತ್ತವನ್ನು ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ನಾವು ವಾಹನ ಖರೀದಿ ಮಾಡಲು ಸಾಲ ನೀಡಿರುತ್ತೇವೆ. ಯಾವ ವಾಹನ ಎಂದು ದಾಖಲೆ ನೋಡದೆ ಹೇಳಲು ಬರುವುದಿಲ್ಲ. ಆರೋಪಿತರಿಗೆ ಹೊಸ ವಾಹನ ಅಥವಾ second hand ವಾಹನ ಖರೀದಿ ಮಾಡಲು ಸಾಲ ಕೊಟ್ಟಿರುತ್ತೇವೆ ಎಂದು ನನಗೆ ದಾಖಲೆ ನೋಡದೆ ಹೇಳಲು ಬರುವುದಿಲ್ಲ. ನಾವು ಆರೋಪಿತರಿಗೆ ಯಾವುದೇ ಸಾಲ ನೀಡಿಲ್ಲ ಮತ್ತು ಅವರಿಂದ ಯಾವುದೇ ದಾಖಲೆ ಪಡೆದಿಲ್ಲ ಎಂದರೆ ಸರಿಯಲ್ಲ. ನನಗೆ ವಾಹನದ ಸಾಲದ ಬಗ್ಗೆ ಸ್ವಲ್ಪ ಮಟ್ಟಿಗೆ ಮಾಹಿತಿ ಇರುತ್ತದೆ. ಸದರಿ ಕೇಸಿನಲ್ಲಿ ಯವ ವಾಹನಕ್ಕೆ ಮತ್ತು ಎಷ್ಟು ಮೊತ್ತಕೆಕ್ಕ ಸಾಲ ನೀಡಿರುತ್ತೇವೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ ಆದರೆ ದಾಖಲೆ ನೋಡದೆ ಹೇಳಲು ಬರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನಗೆ ಈಾ ಕೇಸಿನಲ್ಲಿ ಯಾವುದೇ ಮಾವುತಿ ಇರುವುದಿಲ್ಲ ಮತ್ತು ಯಾವುದೇ ದಾಖ್ಲೆ ಇರುವುದಿಲ್ಲ ಆದರುರಾ ಕೂಡ ನ್ಯಾಯಾಲಯದ ಮುಂದದೆ ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಅಥವಾ ಬೇರೆ ಸಾಲಗಾರರಿಗೆ ಸಾಲದದಿ ಹಣ ಮಂಜೂರು ಮಾಡಿದಾಗ ಯಾವ ದಾಖಲೆಗಳನ್ನು ಭದ್ರತೆಗಾಗಿ ಪಡೆಯುತ್ತೇವೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಸಾಲ ಮಂಜೂರು ಮಾಡಿದ ಮೇಲೆ ವಾಹನದ RC book ನಲ್ಲಿ hypothecation ಬಗ್ಗೆ ನಮೂದು ಮಾಡಿರುತ್ತೇವೆ. ಸದರಿ hypothecation ಮಾಡಿದ ಮೇಲೆ ಸಾಲ ಮಾುತ್ತ ವಾಹನದ ಬಗ್ಗೆ ನಮ್ಮ ಕಂಪ್ಯೂಟರ ನಲ್ಲಿ ಎಲ್ಲಾ ಮಾಹಿತಿ ಬರೆದು ಸಂಗ್ರಹ ಮಾಡಿರುತ್ತೇವೆ. RC Book ನಲ್ಲಿ hypothecation ಎಂದು ನಮ್ಮ ಕಂಪನಿ Tata motors finance ltd ಹೆಸರಿನಲ್ಲಿ ನಮೂದಾಗಿರುತ್ತದೆ. RC Book ನಲ್ಲಿhypothecation ಎಂದು ನಮೂದಾದಾಗ ಆ ವಾಹನವನ್ನು ಬೇರೆಯವರಿಗೆ ಮಾರಾಟ ಮಾಡಲು ಬರುವುದಿಲ್ಲ ಎಂದರೆ ನಿಜ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಎಷಟು ಕಂತು ಸಾಲ ಕಟ್ಟಲಿಲ್ಲ ಎಂದರೆ ನಾವು ಅವರಿಗೆ ಯಾವಾಗ ನೋಟೀಸ್ ನೀಡುತ್ತೇವೆ ಎಂದು ದಾಖಲೆ ನೋಡದೆ ಹೇಳಲು ಬರುವುದಿಲ್ಲ.

**ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

17 ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ ಸದಸ್ಯರು